ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	289
2	ಸದಸ್ಯರ ಹೆಸರು	ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3	ಉತ್ತರಿಸಬೇಕಾದ ದಿನಾಂಕ	09.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಭೂನ್ಯಾಯ ಮಂಡಳಿಯಲ್ಲಿ ಮಂಜೂರಾದ ಮತ್ತು ದರಖಾಸ್ತು ಮಂಜೂರಾದ ಅಂಶಿಕ ಜಮೀನುಗಳ ಖಾತೆದಾರರ ಪೋಡಿ ಮಾಡದೆ ಸರಿಯಾದ ಜಾಗದ ದಾಖಲೆಗಳನ್ನು ಸಿದ್ದಪಡಿಸುವುದು ಸಾಧ್ಯವಾಗದಿರುವ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದಿರಲು ಕಾರಣಗಳೇನು;	**ಭೂನ್ಯಾಯ ಮಂಡಳಿ ಮತ್ತು ದರಖಾಸ್ತು ಮಂಜೂರಾದ ಜಮೀನುಗಳ ಪೋಡಿ ದಾಖಲೆಗಳನ್ನು ಸಿದ್ದಪಡಿಸಲು ಸಾಧ್ಯವಾಗದಿರಲು ಇರುವ ಕಾರಣಗಳೇನೆಂದರೆ,** 1) ಆಕಾರಬಂದು ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು ಹಾಗೂ ಪಹಣಿಯ ಕಾಲಂ 3 ಮತ್ತು 9 ರಲ್ಲಿರುವ ವ್ಯತ್ಯಾಸಗಳಿರುವುದು. 2) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶಗಳು-ಇತರೆ) ಲಭ್ಯವಾಗದಿರುವುದು. 3) ಭೂಮಂಜೂರಾತಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆಗಳ ಸರಿಯಾಗಿ ಲಭ್ಯವಾಗದೇ ಇರುವುದು. 4) ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು. 5) ಭೂಮಂಜೂರಾತಿ ಪ್ರಕರಣಗಳಲ್ಲಿ ಜಮೀನಿನ ಆಕಾರಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ ಪಹಣಿ ಸರಿಪಡಿಸುವಲ್ಲಿ ತೊಂದರೆ ಇರುವುದು. 6) ಭೂಮಂಜೂರಾತಿ ಆದೇಶದಂತೆ ಸರ್ವೆ ನಂಬರು ಮತ್ತು ಅನುಭವದಂತೆ ಸರ್ವೆ ನಂಬರು ಬೇರೆ ಬೇರೆಯಾಗಿರುವುದು. 7) ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿರುವುದನ್ನು ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು 8) ಮಂಜೂರಿದಾರರ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಇರುವುದರಿಂದ, 9) ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ ಮಂಜೂರಾದ ಜಮೀನುಗಳ ಪೋಡಿ ದಾಖಲೆಗಳನ್ನು ಸಿದ್ದಪಡಿಸಲು ವಿಳಂಬವಾಗುತ್ತದೆ

ಆ) ಜನ ಸಾಮಾನ್ಯರಿಗೆ ಸರಿಯಾದ ಜಾಗದ ದಾಖಲೆಗಳನ್ನು ಸಿದ್ಧ ಪಡಿಸುವಲ್ಲಿ ನೆರವಾಗಲು, ಪೋಡಿ ಮುಕ್ತ ಅಭಿಯಾನವನ್ನು ಯಾವಾಗ ಪ್ರಾರಂಭಿಸಲಾಯಿತು ಈ ಅಭಿಯಾನದಂತೆ ತುಮಕೂರು ಜಿಲ್ಲೆಯಲ್ಲಿ ಭೂಮಾಪನ ಕಾರ್ಯ ಪೂರ್ಣಗೊಂಡ ಗ್ರಾಮಗಳು ಯಾವುವು; (ವಿವರಗಳನ್ನು ನೀಡುವುದು)

ರಾಜ್ಯದಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆ ಯನ್ನು **ಮಾಹೆ ಸೆಪ್ಟಂಬರ್-2015** ರಲ್ಲಿ ಪ್ರಾರಂಭಿಸಲಾಗಿದೆ.

ಪೋಡಿ ಮುಕ್ತ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆಯ ಒಟ್ಟು 2826 ಗ್ರಾಮಗಳ ಪೈಕಿ, 1687 ಗ್ರಾಮ ಗಳಲ್ಲಿ ಅಳತೆ ಕಾರ್ಯ ಪೂರೈಸಲಾಗಿದೆ

ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪೂರೈಸಲಾಗದ ಗ್ರಾಮಗಳ ತಾಲ್ಲೂಕುವಾರು ವಿವರ

ಕ್ರ	ತಾಲ್ಲೂಕು	ಅಳತೆ ಕಾರ್ಯ ಪೂರೈಸ ಲಾಗದ ಗ್ರಾಮಗಳ ಸಂಖ್ಯೆ
1	ಚಿಕ್ಕನಾಯಕನಹಳ್ಳಿ	121
2	ಸಿರಾ	116
3	ಪಾವಗಡ	93
4	ಮಧುಗಿರಿ	320
5	ಕೊರಟಗೆರೆ	249
6	ತುಮಕೂರು	385
7	ಗುಬ್ಬಿ	194
8	ತಿಪಟೂರು	108
9	ತುರುವೇಕೆರೆ	47
10	ಕುಣಿಗಲ್	54
	ಒಟ್ಟು	**1687**

ಪೋಡಿ ಮುಕ್ತ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಅಳತೆ ಕಾರ್ಯ ಪೂರ್ಣಗೊಂಡ ಗ್ರಾಮಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ.

ಇ) ಶಿರಾ ತಾಲ್ಲೂಕಿನಲ್ಲಿ ಭೂಮಾಪನ ಕಾರ್ಯ ಪೂರ್ಣಗೊಂಡ ಗ್ರಾಮಗಳಲ್ಲಿ ಖಾತೆದಾರರಿಗೆ ಪಹಣಿ ದಾಖಲಿಸಿ, ಪಹಣಿ ಪತ್ರ ನೀಡುವ ಕಾರ್ಯವನ್ನು ಪೂರ್ಣಗೊಳಿಸ ಲಾಗಿದೆಯೆ? (ವಿವರಗಳನ್ನು ನೀಡು ವುದು)

ಪೋಡಿ ಮುಕ್ತ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನಲ್ಲಿ ಒಟ್ಟು 249 ಗ್ರಾಮಗಳ ಪೈಕಿ, 116 ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರೈಸಿ 112 ಗ್ರಾಮಗಳಲ್ಲಿ ದುರಸ್ತಿ ಕಾರ್ಯವನ್ನು ಪೂರೈಸಿ 14,060 ಏಕವ್ಯಕ್ತಿ ಪಹಣಿಗಳನ್ನು ಸೃಜಿಸಲಾಗಿದೆ.

<u>ಸಂಖ್ಯೆ: ಕಂಇ 175 ಎಸ್‌ಎಸ್‌ಸಿ 2020</u>

(ಆರ್.ಅಶೋಕ)
ಕಂದಾಯ ಸಚಿವರು